## KARNATAKA LOKAYUKTA

No.COMPT/LOK/BCD/2916/2015/ARE(2) M.S. Building,
Bengaluru,
Date:24-02-2021

## REPORT U/SEC. 12 (1) OF KARNATAKA LOKAYUKTA ACT, 1984

**SUB:-** Complaint of Sri Siddalingegowda, S/o Late Bairegowda, Mavinakere Village, Turuvekere Taluk, Tumkur District – alleging about lack of Basic amenities in Govt. Women Ist Grade College, Pavagada, Tumkur District.

**REF:-** Complaint No.LOK/BCD/2916/2015/ARE(2)

**-$$-**

1) One Sri Siddalingegowda, S/o Late Bhiregowda, Mavinakere village, Turuvekere Taluk, Tumkur District has filed complaint dtd. 22.07.2015 against Respondents (1) Sri Koushik Mukharji, the then Chief Secretary to Government (2) Sri Gourav Gupta, Principal Secretary, Dept. of Higher Education & (3)Sri. R. V. Deshapande, the then Hon'ble Minister for Higher Education, Govt. of Karnataka, Bengaluru.

2) The gist of the allegations made by the complainant against the respondents are that the respondents have not discharged their duties in providing basic facilities to Government Women Ist grade college, Pavagada, Tumkur where there are about 380 girl students and that the Education Department has exhibited its irresponsibility and negligence, despite several letters being addressed to Hon'ble Chief Minister, Hon'ble Minister for Higher Education, Chief Secretary and Commissioner during the last 7-8 months, bringing to their notice that the said college is not running with minimum basic facilities to girl students, not provided with drinking water, no permanent lecturers, cracks in class rooms and no safety to the girl students in the college.

3) During the course of investigation, it is ascertained that the respondents made in the complaint were not holding the respective office. Hence, factual report was called from the Regional Joint Director of Collegiate Education, Bengaluru.

4) The Joint Director of Collegiate Education Bengaluru in their letter No. ಕಾಶಿಇ:ಪ್ರಾಕಬೆಂ:ಅಂ-139:ಲೋಕಾ:2016-17 dated 03-04-2017 has stated as follows.

No. Compt/LOK/BCD/2916/2015/ARE(2)

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂ:ಕಾಶಿಇ;ಪ್ರಾಕಬೆಂ:ಆಂ-1:39:ಲೋಕಾ:2016-17

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
ಬೆಂಗಳೂರು-09,
ದಿನಾಂಕ: 03-04-2017

ಇವರಿಗೆ:-

ಮಾನ್ಯ ಲೋಕಾಯುಕ್ತರು,
ಕರ್ನಾಟಕ ಲೋಕಾಯುಕ್ತ,
ಬಹುಮಹಡಿಗಳ ಕಟ್ಟಡ,
**ಬೆಂಗಳೂರು-560 001.**

ಮಾನ್ಯರೇ,

ವಿಷಯ:-ಶ್ರೀ ಸಿದ್ದಲಿಂಗೇಗೌಡ, ತುಮಕೂರು ಇವರು ಸರ್ಕಾರಿ ಮಹಿಳಾ ಕಾಲೇಜು, ಪಾವಗಡ ಕಾಲೇಜಿಗೆ ಸಂಬಂಧಿಸಿದಂತೆ, ಲೋಕಾಯುಕ್ತದಲ್ಲಿ ದೂರು ದಾಖಲಿಸಿರುವ ಬಗ್ಗೆ:

ಉಲ್ಲೇಖ:-ತಮ್ಮಕಛೇರಿ ಪತ್ರ ಸಂ:ಎಲ್.ಓ.ಕೆ:ಬಿಸಿಡಿ:2916:2015: ಎಆರ್ಇ(2)

-----

ಸೂಚಿತ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪಾವಗಡ – ಈ ಕಾಲೇಜು 2014-15ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಪ್ರಾರಂಭಗೊಂಡಿದ್ದು, ಪ್ರಸ್ತುತ 521 ವಿದ್ಯಾರ್ಥಿನಿಯರು ಬಿಎ/ಬಿ.ಕಾಂ ಮತ್ತು ಬಿ.ಕಾಂ ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಈ ಕಾಲೇಜು 2014-15 ರಿಂದ ಪಾವಗಡದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ನಡೆಯುತ್ತಿದೆ.

ಮೊದಲನೆದಾಗಿ ದೂರುದಾರರು ಈ ಕಾಲೇಜಿನ ವಿದ್ಯಾರ್ಥಿನಿಯರು ಎಲ್ಲ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುತ್ತಾರೆಂದು ದೂರಿರುತ್ತಾರೆ. ಇಲಾಖೆಯಿಂದ ಅಗತ್ಯವಿರುವಷ್ಟು ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದು. ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಆರ್ಥಿಕ ತೊಂದರೆಯಾಗದಂತೆ ಸಿ.ಡಿ.ಸಿ. ಸಮಿತಿಯಿಂದ ಒಪ್ಪಿಗೆ ಪಡೆದು, ಸ್ಥಳೀಯ ದಾನಿಗಳಿಂದ ವಸ್ತು ಮತ್ತು ಹಣದ ರೂಪದಲ್ಲಿ ಸ್ವೀಕರಿಸಿ, ಸಾಧ್ಯವಾದಷ್ಟು ಸೌಕರ್ಯಗಳನ್ನು ಒದಗಿಸಲಾಗಿದೆ.

ಎರಡನೆಯದಾಗಿ, ವಿದ್ಯಾರ್ಥಿನಿಯರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಗೊಳಗಾಗಿದ್ದಾರೆ ಎಂಬುದು. ಈ ವಿಚಾರವಾಗಿ ಕಾಲೇಜಿನ ಬೋಧಕ ಮತ್ತು

No. Compt/LOK/BCD/2916/2015/ARE(2)

ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿನಿಯವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿರುತ್ತಾರೆ.

ಕಾಲೇಜು ನಡೆಯುವಾಗ ಪ್ರತಿನಿತ್ಯ 100ಲೀಟರ್ ಶುದ್ದ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಸಿ.ಡಿ.ಸಿ. ಖಾತೆಯಲ್ಲಿ ಖರೀದಿಸಿ, ವಿದ್ಯಾರ್ಥಿನಿಯರಿಗೆ ಒದಗಿಸಲಾಗಿರುತ್ತದೆ. ಬಳಸುವ ನೀರಿಗಾಗಿ ಪಾವಗಡ ತಾಲ್ಲೂಕು ಪಂಚಾಯಿತಿಯಿಂದ 1.5 ಟ್ಯಾಂಕರ್ ನೀರು ತುಂಬುವಷ್ಟು ನೆಲನೀರಿನ ತೊಟಿಯನ್ನು ನಿರ್ಮಿಸಲಾಗಿದೆ.

ಪ್ರಸ್ತುತ ರಸ್ತೆ ಅಗಲೀಕರಣ ಮಾಡುತ್ತಿರುವುದರಿಂದ, ಪೈಪ್ ಲೈನ್ ಹಾಳಾಗಿ 02 ತಿಂಗಳಿನಿಂದ ನೀರು ಪೂರೈಕೆಯಾಗಿರುವುದಿಲ್ಲ. ಆದರೂ ಪುರಸಭೆ ವತಿಯಿಂದ ಹಾಗೂ ಖಾಸಗಿಯವರಿಂದ ಟ್ಯಾಂಕರ್ ನೀರನ್ನು ಖರೀದಿಸಿ, ವಿದ್ಯಾರ್ಥಿನಿಯರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

ವಿದ್ಯಾರ್ಥಿನಿಯರಿಗಾಗಿ 03 ಶೌಚಾಲಯಗಳ ವ್ಯವಸ್ಥೆಯಿದ್ದು, ಅವುಗಳ ಬಗ್ಗೆ ಈವರೆವಿಗೂ ವಿದ್ಯಾರ್ಥಿನಿಯರಿಂದ ಯಾವುದೇ ರೀತಿಯ ದೂರುಗಳು ಬಂದಿರುವುದಿಲ್ಲ.

ಖಾಯಂ ಉಪನ್ಯಾಸಕರು ಒಬ್ಬರು ಮಾತ್ರ ಸವೆ ಸಲ್ಲಿಸುತ್ತಿದ್ದು, ಪಾವಗಡದ ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ 07 ಜನ ಖಾಯಂ ಉಪನ್ಯಾಸಕರು ನಿಯೋಜನೆ ಮೇರೆಗೆ ಈ ಕಾಲೇಜಿನಲ್ಲಿ ವಾರದಲ್ಲಿ 02 ದಿವಸ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಾಗೂ 29 ಅತಿಥಿ ಉಪನ್ಯಾಸಕರು ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಬೋಧನೆಗೆ ಯಾವುದೇ ತೊಂದರೆಯಾಗಿರುವುದಿಲ್ಲ.

ಹೆಣ್ಣುಮಕ್ಕಳ ಸುರಕ್ಷತೆಯ ಬಗ್ಗೆ ಸಾಧ್ಯವಾದಷ್ಟು ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಗಸ್ತಿಗೆ ವ್ಯವಸ್ಥೆ ಮಾಡಲಾಗಿದೆ. ಕಾಲೇಜಿನ ಮುಂಭಾಗದಲ್ಲಿನ ರಸ್ತೆಯಲ್ಲಿ ವಾಹನಗಳು ಮತ್ತು ಸಾರ್ವಜನಿಕರು ಓಡಾಡುವುದನ್ನು ತಡೆಗಟ್ಟಲಾಗಿದೆ. ಪ್ರಸ್ತುತ 02 ಕೊಠಡಿಗಳು ಮಾತ್ರ ಕೊರತೆಯಿದ್ದರೂ ನಿಭಾಯಿಸಲಾಗುತ್ತಿದೆ. ಈವರೆವಿಗೂ ಇಲಾಕೆಯ ವತಿಯಿಂದ ಗ್ರಂಥಾಲಯಕ್ಕೆ 1.00 ಲಕ್ಷ ರೂಪಾಯಿಗಳ ಮೌಲ್ಯದಷ್ಟು ಪುಸ್ತಕಗಳು ಸರಬರಾಜಾಗಿದೆ. ಜೊತೆಗೆ ದಾನಿಗಳಿಂದ 1.18,000-00(ಒಂದು ಲಕ್ಷದ ಹದಿನೆಂಟು ಸಾವಿರ ರೂಪಾಯಿಗಳು ಮಾತ್ರ)ಗಳ ಮೌಲ್ಯದಷ್ಟು ಪುಸ್ತಕಗಳನ್ನು ಗ್ರಂಥಾಲಯಕ್ಕೆ ಪಡೆಯಲಾಗಿದೆ. ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ, ಸರ್ಕಾರಿ ಪದವಿಪೂರ್ವ ಕಾಲೇಜಿನಿಂದ ಮತ್ತು ಸರ್ಕಾರಿ ಪ್ರೌಢಶಾಲೆಯಿಂದ ಅಗತ್ಯವಿರುವಷ್ಟು ಡೆಸ್ಕ್‌ಗಳನ್ನು ಪಡೆದು, ವಿದ್ಯಾರ್ಥಿನಿಯರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಒಟ್ಟು 13 ಕೊಠಡಿಗಳು ನಮ್ಮ ಕಾಲೇಜಿನ ಜವಾಬ್ದಾರಿಯಲ್ಲಿದ್ದು, ಇವುಗಳಲ್ಲಿ 07 ಕೊಠಡಿಗಳ ಸಣ್ಣಪುಟ್ಟ ರಿಪೇರಿಗಳನ್ನು ಪ್ಲಾಸ್ಟರ್ ಕೆಲಸವನ್ನು ಕಿಟಕಿಗಳ ರಿಪೇರಿಯನ್ನು ಸಿ.ಡಿ.ಸಿ. ವತಿಯಿಂದ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜಿನ ವತಿಯಿಂದ ಮಾಡಿಸಲಾಗಿದೆ.

ಬಿಕಾಂ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿನಿಯರಿಗಾಗಿ ಸ್ಥಳೀಯ ದಾನಿಗಳ ಸಹಕಾರದಿಂದ ಕಂಪ್ಯೂಟರ್ ಲ್ಯಾಬ್‌ವೊಂದನ್ನು ವ್ಯವಸ್ಥೆಮಾಡಲಾಗಿದೆ. 14 ಕಂಪ್ಯೂಟರ್‌ಗಳನ್ನು , 01 ಯು.ಪಿ.ಎಸ್ ಅನ್ನು ದಾನಿಗಳಿಂದ ಪಡೆಯಲಾಗಿದೆ. ದಾನಿಯೊಬ್ಬರಿಂದ ಲ್ಯಾಬ್‌ಗಾಗಿ ವಿದ್ಯುದೀಕರಣದ ವ್ಯವಸ್ಥೆ ಮಾಡಲಾಗಿದೆ. ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಮನವಿ ಮೇರೆಗೆ 2015-16 ರಿಂದ ಸಮವಸ್ತ್ರವನ್ನು ಜಾರಿಗೆ ತರಲಾಗಿದೆ.

No. Compt/LOK/BCD/2916/2015/ARE(2)

ಪಾವಗಡ ಪಟ್ಟಣಕ್ಕೆ 02 ಕಿ.ಮೀ ದೂರದಲ್ಲಿರುವ ನಲಿಗಾನಹಳ್ಳಿ ಸರ್ವೆ ನಂ: 83/2ಕ್ಕೆ ಸೇರಿದ 14.28 ಎಕರೆ ನಿವೇಶವನ್ನು ಈ ಕಾಲೇಜಿನ ಕಟ್ಟಡಕ್ಕಾಗಿ ಸಿ.ಡಿ.ಸಿ. ಸಭೆಯಲ್ಲಿ ನಿರ್ಣಯ ತೆಗೆದುಕೊಂಡು, ನಿಗಧಿಪಡಿಸಲಾಗಿದೆ. ಕಟ್ಟಡದ ಪ್ಲಾನ್ ಸಿದ್ದವಾಗಿದೆ. ನಿವೇಶನದ ಮಣ್ಣಿನ ಎರಡನೇ ಪರೀಕ್ಷೆಗೆ ಬೆಂಗಳೂರಿನಲ್ಲಿರುವ ಡಿಸೈನ್ ವಿಭಾಗಕ್ಕೆ ಪಾವಗಡದ ಪಿ.ಡಬ್ಲ್ಯೂಡಿ ಇಲಾಖೆಯವರು ಕಳುಹಿಸಿಕೊಟ್ಟಿರುತ್ತಾರೆ. ಪ್ರಸ್ತುತ ಕಾಲೇಜಿನ ಕಟ್ಟಡದ ನಿರ್ಮಾಣಕ್ಕಾಗಿ 02 ಕೋಟಿ ರೂಪಾಯಿಗಳ ಅನುದಾನವನ್ನು ಸರ್ಕಾರವು ಮಂಜೂರು ಮಾಡಿದೆ. ಕಾಲೇಜಿನ ಸರ್ವತೋಮುಖ ಅಭಿವೃದ್ದಿಗೆ ಇಲಾಖೆ ಮತ್ತು ಕಾಲೇಜಿನ ಸಿಬ್ಬಂದಿವರ್ಗ ಹಗಲು ರಾತ್ರಿ ಸಿದ್ದವಿರುವುದರಿಂದ, ತಮ್ಮಗಳ ಸಹಕಾರ ಸದಾ ಇರಬೇಕೆಂದು ತಮ್ಮಲ್ಲಿ ನಮ್ರತೆಯಿಂದ ಮನವಿ ಮಾಡಿಕೊಳ್ಳುತ್ತೇನೆ.

ತಮ್ಮ ವಿಶ್ವಾಸಿ,<br>
ಸಹಿ/-<br>
ಜಂಟಿನಿರ್ದೇಶಕರು,<br>
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ,<br>
ಬೆಂಗಳೂರು-560 009.

5) On perusal of the said report, though the questioned college is **Government Ist grade women college,** it is stated that most of the basic facilities are provided to the college by **utilizing funds from the local donors**. It is further stated that for **521 students,** there are **only three toilets** and **books to the college library** is arranged with the help of the **local donors**. The Joint Director has further stated that 14.28 acres of land at Sy. No. 83/2 of Naliganahalli is allotted to construct college Building. The Building plan is kept ready. The government has sanctioned two crores of rupees to construct the college building. But, the complainant in his further letter dated 21-01-2018 received on 01-02-2018 has stated that till date minimum basic facilities are not provided to the said women college and further requested to make spot inspection of the said college.

6) On perusal of the complaint, report and further letter of the complainant, it is noticed that though the questioned college is Government college, the government in education department has not taken steps to provide basic needs of the students. However, from the report of Joint Director of Collegiate education, it is noticed that facilities to some extent is provided to the students with the help of the local donors **though the said college is women college having 521 degree students run by Government.** In the report of Joint Director, it is not clearly mentioned that when the Government sanctioned two crores of rupees for the construction of college building and also allotment of land at Sy No. 83/2 at Naliganahalli, Pavagada Taluk.

7) Hence, a report under Sec. 12(1) of Karnataka Lokayukta Act, 1984 is sent herewith along with original copies of connected documents as per index with recommendation to the Competent Authority i.e. Principal Secretary to Government, Higher Education Department, Bangalore to take immediate action for providing basic facilities to the said Government Women Ist Grade college, Pavagada, in Tumkur District within one month from the date of receipt of this report as required u/Sec. 12(2) of Karnataka Lokayukta Act, 1984.

**(Justice P. Vishwanatha Shetty)**
**Karnataka Lokayukta**